ದಿನಾಂಕ 28.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಎಲ್ ಎ ವಕೀಲರಿಂದಃ

ಈ ದಾವೆ ದಿನಾಂಕ 10.01.2014 ರಲ್ಲಿ ವಾದಿಯ ಪರವಾಗಿ ಡಿಕ್ರಿ ಆಗಿದೆ ಎಂದರೇ ಹೌದು. ಆ ದಾವೆಗೆ ಸಂಬಂದ ಪಟ್ಟಂತೆ ಮಿಸ್ 2/2014 ರಂತೆ ಅರ್ಜಿ ದಾಖಲಿಸಿದ್ದು ಅದು ದಿ 09.06.2020 ರಂದು ವಜಾ ಆಗಿದೆ ಎಂದರೇ ಹೌದು. ಆ ಆದೇಶದ ವಿರುದ್ದ ಎಂ ಎ 2/2021 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೇ ಹೌದು. ಅದು ದಿ 09.06.2023 ರಂದು ಪುರಸ್ಕೃತವಾಗಿದೆ ಎಂದರೇ ಹೌದು. ಮೇಲ್ಮನವಿ ಸಲ್ಲಿಸುವಾಗ ನಾನು ನೀಡಿದ ವಿಳಾಸ ವಾದ ಪತ್ರ ಮತ್ತು ಕ್ರಯದ ಕರಾರು ಪತ್ರದಲ್ಲಿ ತಿಳಿಸಿರುವ ವಿಳಾಸ ಒಂದೇ ಎಂದರೇ ಹೌದು. ನಾನು ಶಾಲಾ ಶಿಕ್ಷಕ. ನಾನು ಉಪ ಪ್ರಾಂಶುಪಾಲರು ಆಗಿದೆ. ನಿಪಿ-3 ರ ಒಕ್ಕಾಣೆ ಸ್ವಾಧೀನ ರಹಿತ ಶುದ್ದ ಕರಾರು ಪತ್ರ ಎಂದರೇ ಹೌದು. ನಿಪಿ-3ಕ್ಕೆ ಪರಿಯಾಯವಾಗಿ ನನ್ನ ಮತ್ತು ಮೂಲ ವಾದಿಯ ನಡುವೆ ಯಾವುದೇ ಬೇರೆ ದಾಖಲೆಗಳು ಇರುವುದಿಲ್ಲ. ನಿಪಿ-3 ನೋಂದಾಣಿಯಾದ ದಾಖಲೆ ಆಗಿದೆ ಎಂದರೇ ಹೌದು. ನಿಪಿ-3 ನ್ನು ದಿ 10.06.2011 ರಂದು ಮೂಲ ವಾದಿಗೆ ಬರೆದುಕೊಟ್ಟಿದ್ದೇನೆ ಎಂದರೇ ಹೌದು. ನಿಪಿ-3ರ ಪ್ರತಿ ಪುಟದಲ್ಲೂ ನಮ್ಮ ಸಹಿಗಳು ಇವೇ ಎಂದರೇ ಹೌದು. ನಿಪಿ-3 ರಲ್ಲಿ ತೋರಿಸಿರುವ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಎಂದರೇ ಹೌದು. ನಿಪಿ-3 ರಲ್ಲಿ ಕರಾರು ಆದ ಒಂದು ವರ್ಷದ ಒಳಗೆ ಕ್ರಯ ಪತ್ರ ಬರೆದುಕೊಡುತ್ತೇವೆ ಎಂದು ನಮೂದು ಆಗಿದೆ ಎಂದರೇ ಹೌದು. ನಿಪಿ-3 ರಲ್ಲಿ ದಾವಾ ಸ್ವತ್ತಿನ ಬೆಲೆ 8 ಲಕ್ಷದ 50 ಸಾವಿರ ಎಂದು ತೋರಿಸಿದ್ದೇವೆ ಎಂದರೇ ಹೌದು. ನಿಪಿ-3 ರ ಪ್ರಕಾರ 8 ಲಕ್ಷದ 50 ಸಾವಿರ ಪೈಕಿ 8 ಲಕ್ಷ ಪಡೆದುಕೊಂಡಿದ್ದೇನೆ ಎಂದು ನಮೂದು ಇದೆ ಎಂದರೇ ಹೌದು ಆದರೆ ನಾನು ಪಡೆದುಕೊಂಡಿಲ್ಲ.

2. ನಿಪಿ-3 ಕ್ಕೆ ಸಂಬಂದ ಪಟ್ಟಂತೆ ಹಣ ಕೊಡಲಿಲ್ಲ ಎಂದು ಉಪನೋಂದಾಣಿಧಿಕಾರಿ ಕಚೇರಿಗೆ ದೂರು ನೀಡಿದ್ದೆ. ಅಲ್ಲದೆ ಮೂಲ ವಾದಿ ವಿರುದ್ದ ಯಾವುದಾದರೂ ದೂರು ದಾಖಲು ಮಾಡಿದ್ದೀರ ಎಂದರೇ ಹೌದು. ಬಿಡದಿ ಪೋಲೀಸ್ ಠಾಣೆಗೆ ನೀಡಿದ್ದೇನೆ. ಆ ದಾಖಲೆ ಹಾಜರುಪಡಿಸಿದ್ದೀರ ಎಂದರೇ ಇಲ್ಲ. ದೂರು ಕೊಟ್ಟಾಗ ದೂರು ದಾಖಲಾಗಿದೆ ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇತ್ತ ಎಂದರೇ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ Nominal and Formal Sale argument ಎಂದು ತಿಳಿಸಿದ್ದು ಅದಕ್ಕೆ

ಸಂಬಂದ ಪಟ್ಟಂತೆ ದಾಖಲೆ ಇದೆಯಾ ಎಂದರೇ ಇಲ್ಲ. ಕ್ರಯ ಕರಾರು ಆದ ನಂತರ ಮೂಲ ವಾದಿ ಕ್ರಯ ಪತ್ರವನ್ನು ಬರೆದುಕೊಡುವಂತೆ ನನ್ನ ಹತ್ತಿರ ಹಲವಾರು ಬಾರಿ ಕೇಳಿದ್ದರು ಎಂದರೇ ಇಲ್ಲ. ಅದಕ್ಕೆ ನಾನು ಸ್ಪಂದಿಸಿಲ್ಲ ಎಂದರೇ ಸರಿಯಲ್ಲ. ನಾನು ಸ್ಪಂದಿಸಿದ ಕಾರಣ ದಿ 13.04.2012 ರಲ್ಲಿ ಲಿಖಿತವಾಗಿ ಕಾನೂನು ತಿಳುವಳಿಕೆ ಪತ್ರವನ್ನು ನೀಡಿದ್ದಾರ ಎಂದರೇ ಸಾಕ್ಷಿ ನಿಪಿ-6 ವಿಳಾಸದಲ್ಲಿ ಇರಲಿಲ್ಲ. ಬೇರೆ ವಿಳಾಸಕ್ಕೆ ನೀಡಿದ್ದಾರೆ. ನಿಪಿ-6 ರಲ್ಲಿ ಇರುವ ವಿಳಾಸ ವಾದ ಪತ್ರ, ಕಾರರು ಪತ್ರ ಮಿಸ್ ಅರ್ಜಿಯಲ್ಲಿ ಇರುವ ವಿಳಾಸ ಎಂ ಎ ಮೇಲ್ಮನವಿ ಯಲ್ಲಿರುವ ವಿಳಾಸ ಒಂದೇ ಎಂದರೇ ಹೌದು.

3. ನೋಟೀಸ್ ಜಾರಿಯಾಗಿರುವ ಸಂಬಂದ ನಿಪಿ-12 ಮತ್ತು 13 ನ್ನು ಹಾಜರುಪಡಿಸಿದ್ದಾರೆ ಎಂದರೇ ನನ್ನ ಗಮನಕ್ಕೆ ಇರುವುದಿಲ್ಲ. 2012 ರಿಂದ ಇಲ್ಲಿಯವರೆಗೂ ವಾದ ಪತ್ರದಲ್ಲಿರುವ ವಿಳಾಸದಲ್ಲಿ ಪ್ರತಿನಿಧಿಸುತ್ತಿದ್ದೇನೆ ಎಂದರೇ ಹೌದು. ನೋಟೀಸ್ ಗೆ ಉತ್ತರವನ್ನು ಕೊಟ್ಟಿದ್ದೀರ ಎಂದರೇ ನೆನಪಿಲ್ಲ. ದಾವೆ ದಾಖಲಾದ ನಂತರ ವಾದಿ ಪರವಾಗಿ ಮತ್ತು ನಿಮ್ಮ ಪರವಾಗಿ ಯಾವ ದಾಖಲೆ ಹಾಜರುಪಡಿಸಿದ್ದೀರ ಎಂದು ತಿಳಿದುಕೊಂಡಿದ್ದೀರ ಎಂದರೇ ಇಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಕ್ರಯದ ಕರಾರು ಬರೆದುಕೊಟ್ಟಿದ್ದೇನೆ ಎಂದರೇ ಹೌದು. ನಿಪಿ-3 ಆಗುವ ಸಮಯಕ್ಕೆ ಮೂಲ ವಾದಿಯ ಪರಿಚಯ ನನಗೆ ಇರುವುದಿಲ್ಲ. ಕ್ರಯ ಕರಾರು ಆಗುವ ಕಾಲಕ್ಕೆ ನಿಪಿ-3 ನ್ನು ಸಂಪೂರ್ಣವಾಗಿ ಓದಿ ಹಣ ಪಡೆದು ಸಹಿ ಮಾಡಿದ್ದೀರಿ ಎಂದರೇ ಸಾಕ್ಷಿ ಹಣ ಪಡೆದಿಲ್ಲ ಆದರೆ ನಿಪಿ-3 ನ್ನು ಓದಿ ಸಹಿ ಮಾಡಿದ್ದೇನೆ. ರಮೇಶ್ ರವರ ಮೂಲಕ ನಿಪಿ-3 ರ ವ್ಯವಹಾರ ನನ್ನ ಮತ್ತು ಮೂಲ ವಾದಿ ನಡುವೆ ನಡೆದಿದೆ ಎಂದರೇ ಹೌದು. ರಮೇಶ್ ರವರು ಮೂಲಕ ಮೂಲ ವಾದಿ ಬಗ್ಗೆ ನನಗೆ ಗೊತ್ತಾಗಿದೆ. ವಾದಿ ಅಷ್ಟು ಹಣವನ್ನು ಕೊಡಲು ಶಕ್ತರಲ್ಲ ಎಂದು ತಿಳಿಸಿದ್ದು ದಾಖಲೆ ಕೊಟ್ಟಿದ್ದೀರ ಎಂದರೇ ಇಲ್ಲ. ನಿಪಿ-3 ನ್ನು ರದ್ದು ಗೊಳಿಸಲು ಯಾವುದಾದರೂ ಕ್ರಮ ಕೈಗೊಂಡಿದ್ದೀರ ಎಂದರೇ ಇಲ್ಲ. ಈ ದಾವೆಯಲ್ಲಿ ಸಹ ನಾನು ಆ ಪರಿಹಾರ ಕೇಳಿಲ್ಲ.

4. ನಾನು ಬೇರೆ ಆಸ್ತಿಯನ್ನು ಖರೀದಿ ಮಾಡಿದ್ದೇನೆ. ಅದಕ್ಕೆ ಸಂಬಂದ ಪಟ್ಟಂತೆ ಕ್ರಯ ಪತ್ರ ಮತ್ತು ಕ್ರಯ ಕರಾರು ಪತ್ರ ಆಗಿದೆ ಎಂದರೇ ಹೌದು. ಸ್ವತ್ತನ್ನು ಖರೀದಿ ಮಾಡುವ ಮತ್ತು ಮಾರಾಟ ಮಾಡುವ ವ್ಯವಹಾರದ ಬಗ್ಗೆ ಗೊತ್ತ ಎಂದರೇ ಸ್ವಲ್ಪ ಗೊತ್ತು. ಖರೀದಿ ವ್ಯವಹಾರದಲ್ಲಿ ಹಣಕಾಸಿನ ವ್ಯವಹಾರ ಬಿಟ್ಟು ಬೇರೆ ಯಾವ ವ್ಯವಹಾರ ಬರುವುದಿಲ್ಲ ಎಂದರೇ ಸರಿಯಲ್ಲ. ಮಾರಾಟ ಪ್ರತಿಕ್ರಿಯೆಗೆ ಸಂಬಂದ ಪಟ್ಟಂತೆ ಬಿಟ್ಟು ಬೇರೆ ದಾಖಲೆ ಹಾಜರುಪಡಿಸಿಲ್ಲ. ತೀರ್ಪು ಆದ ನಂತರ ಉಳಿದ ಹಣಕ್ಕೆ ವಾದಿ ಜಾರಿ ಅರ್ಜಿ ಸಲ್ಲಿಸಿದ್ದರು ಎಂದರೇ ಹೌದು. ಆ ಜಾರಿ ಪ್ರಕರಣದಲ್ಲಿ ಉಳಿಕೆ ಹಣವನ್ನು ನ್ಯಾಯಾಲಯಕ್ಕೆ ಠೇವಣಿ

ಮಾಡಿದ್ದರು ಎಂದರೇ ಗೊತ್ತಿಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡಲು ವಾದಿಯೊಂದಿಗೆ ಕ್ರಯ ಕರಾರು ಮಾಡಿಕೊಂಡಿದ್ದೇನೆ. ಅದನ್ನು ಬಿಟ್ಟು ಬೇರೆ ಇಲ್ಲ ಎಂದರೇ ಸುಳ್ಳು. ವಾದಿಗೆ ದಾವಾ ಸ್ವತ್ತಿಗೆ ಸಂಬಂದ ಪಟ್ಟಂತೆ ಕ್ರಯ ಕರಾರು ಬರೆದುಕೊಡಲು ಬಾದ್ಯಸ್ಥರು ಎಂದರೇ ಸುಳ್ಳು. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಸುಳ್ಳು ಎಂದರೇ ಸರಿಯಲ್ಲ. ಮುಖ್ಯ ವಿಚಾರಣೆಗೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೇ ಸರಿ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)